ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 18/11/20

# ರಾಜ್ಯದಲ್ಲಿ 8 ತಿಂಗಳ ಬಳಿಕ ಕಾಲೇಜು ಶುರು


## ತಾಂತ್ರಿಕ, ಡಿಗ್ರಿ, ಪಿಜಿ, ಡಿಪ್ಲೊಮಾ ಅಂತಿಮ ವರ್ಷದ ತರಗತಿ ಆರಂಭ

## ಮೊದಲ ದಿನ ಕೇವಲ ಶೇ.10ರಿಂದ ಶೇ.15 ವಿದ್ಯಾರ್ಥಿಗಳು ಹಾಜರ್

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕೊರೋನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ಎಂಟು ತಿಂಗಳಿಂದ ಸ್ಥಗಿತಗೊಂಡಿದ್ದ ಅಂತಿಮ ಪದವಿ, ಡಿಪ್ಲೊಮಾ ಮತ್ತು ಸ್ನಾತಕೋತ್ತರ ತರಗತಿಗಳು ಮಂಗಳವಾರ ಪುನಾರಂಭಗೊಂಡಿದ್ದು, ಮೊದಲ ದಿನ ರಾಜ್ಯಾದ್ಯಂತ ವಿದ್ಯಾರ್ಥಿಗಳಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಬೆಂಗಳೂರು ಸೇರಿ ರಾಜ್ಯಾದ್ಯಂತ ಶೇ.10ರಿಂದ 15ರಷ್ಟು ವಿದ್ಯಾರ್ಥಿಗಳಷ್ಟೇ ತರಗತಿಗೆ ಹಾಜರಾದರು. ಕಡಿಮೆಯಾಗದ ಕೊರೋನಾತಂಕ, ಕೋವಿಡ್ ಪರೀಕ್ಷಾ ಪ್ರಮಾಣಪತ್ರ ಮತ್ತು ಪಾಲಕರ ಅನುಮತಿ ಪತ್ರ ಕಡ್ಡಾಯಗೊಳಿಸಿರುವುದೇ ಮೊದಲ ದಿನ ವಿದ್ಯಾರ್ಥಿಗಳ ಹಾಜರಾತಿ ಗಣನೀಯವಾಗಿ ಕುಸಿಯಲು ಕಾರಣವಾಯಿತು.

ಸರ್ಕಾರದ ನಿರ್ದೇಶನದಂತೆ 8 ತಿಂಗಳ ಬಳಿಕ ಬಾಗಿಲು ತೆರೆದಿರುವ ಕಾಲೇಜುಗಳಲ್ಲಿ ಕೋವಿಡ್ ನಿಯಮಾನುಸಾರ ವಿದ್ಯಾರ್ಥಿಗಳ ಕೊರೋನಾ ಪರೀಕ್ಷಾ ವರದಿ ಪರಿಶೀಲನೆ, ಪೋಷಕರಿಂದ ಹಾಜರಾತಿ ಒಪ್ಪಿಗೆ ಪತ್ರ ಪರಿಶೀಲಿಸುವ ಜೊತೆಗೆ ಪ್ರವೇಶ ದ್ವಾರದಲ್ಲೇ ಕೈಗಳಿಗೆ ಸ್ಯಾನಿಟೈಸರ್ ಹಾಕಿ, ಥರ್ಮಲ್ ಸ್ಕ್ಯಾನಿಂಗ್ ನಡೆಸುವ ಜತೆಗೆ ಅವರು ಮಾಸ್ಕ್ ಧರಿಸಿರುವುದನ್ನು ಖಚಿತಪಡಿಸಿಕೊಂಡೇ ಕಾಲೇಜಿನ ಒಳ ಬಿಡಲಾಯಿತು. ಕೋವಿಡ್ ಪರೀಕ್ಷಾ ಪ್ರಮಾಣಪತ್ರ ಇಲ್ಲದ ವಿದ್ಯಾರ್ಥಿಗಳನ್ನು ವಾಪಸ್ ಕಳುಹಿಸಲಾಯಿತು. ಇನ್ನು ತರಗತಿಗಳಲ್ಲೂ ಸಾಮಾಜಿಕ ಅಂತರ ಕಡ್ಡಾಯ ಮಾಡಲಾಗಿತ್ತು. ಪ್ರತಿ ಡೆಸ್ಕ್ ಒಬ್ಬರು ಅಥವಾ ಇಬ್ಬರು ವಿದ್ಯಾರ್ಥಿಗಳಿಗಷ್ಟೇ ಕೂರುವ ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗಳ ಕೊರತೆಯಿಂದ ಮೊದಲ ದಿನ ಮಧ್ಯಾಹ್ನದ ವರೆಗಷ್ಟೇ ತರಗತಿಗಳು ನಡೆದಿದ್ದು, ಬಾಗಲಕೋಟೆ, ದಕ್ಷಿಣ ಕನ್ನಡ, ಉಡುಪಿ, ತುಮಕೂರಿನ ಕೆಲವೆಡೆ ವಿದ್ಯಾರ್ಥಿಗಳೇ ಇಲ್ಲದೆ ಉಪನ್ಯಾಸಕರು ಆನ್‌ಲೈನ್ ಮೂಲಕ ಪಾಠ ಮಾಡಬೇಕಾಯಿತು.



ಬೆಂಗಳೂರಿನ ಮಹಾರಾಣೀಸ್ ಕಾಲೇಜಿನಲ್ಲಿ ಮಂಗಳವಾರ ಸಾಮಾಜಿಕ ಅಂತರ ಕಾಪಾಡಿಕೊಂಡು ನಡೆಸಲಾದ ಪದವಿ ತರಗತಿಯ ದೃಶ್ಯ.

**ಟೆಸ್ಟ್, ಬಸ್‌ಪಾಸ್ ಗೊಂದಲ:** ಕಾಲೇಜಿಗೆ ಹಾಜರಾಗಲು ಬಹುತೇಕ ವಿದ್ಯಾರ್ಥಿಗಳಿಗೆ ತಲೆನೋವಾಗಿ ಕಾಡಿದ್ದು ಕೋವಿಡ್ ಟೆಸ್ಟ್ ವರದಿ ತರಲೇಬೇಕೆಂಬ ಕಡ್ಡಾಯ ನಿಯಮ. ಬೆಂಗಳೂರು, ಮೈಸೂರು, ಬೀದರ್, ಉಡುಪಿ, ಮಂಗಳೂರು, ಕೋಲಾರ ಮುಂತಾದೆಡೆ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಕಾಲೇಜಿನಲ್ಲಿಯೇ ಸ್ವಾಬ್ ಟೆಸ್ಟ್ ಸೆಂಟರ್‌ಗಳನ್ನು ತೆರೆಯಲಾಗಿತ್ತು.

ಪ 10

### ಇಬ್ಬರು ವಿದ್ಯಾರ್ಥಿಗಳಿಗೆ ಕೊರೋನಾ ಸೋಂಕು

ಕಾಲೇಜುಗಳು ಆರಂಭವಾದ ಮೊದಲ ದಿನ ರಾಜ್ಯದ ಅನೇಕ ಕಾಲೇಜುಗಳಲ್ಲಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಕಾಲೇಜು ಕ್ಯಾಂಪಸ್ ಹಾಗೂ ಸಮೀಪದ ಕೋವಿಡ್ ಪರೀಕ್ಷಾ ಕೇಂದ್ರದಲ್ಲಿ ಕೋವಿಡ್ ಟೆಸ್ಟ್ ನಡೆಸಲಾಗಿದ್ದು, ಈ ವೇಳೆ ಬೆಂಗಳೂರಿನ ಅಗ್ರಹಾರ ದಾಸರಹಳ್ಳಿ ವಾರ್ಡ್ ವ್ಯಾಪ್ತಿಯ ಕಾಲೇಜಿನಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿದೆ.


# ರಾಜ್ಯದಲ್ಲಿ 8 ತಿಂಗಳ ಬಳಿಕ ಕಾಲೇಜು ಶುರು

ಮೊದಲ ಪುಟದಿಂದ

ಆದರೂ ಬೆಳಗಾವಿ, ಬಾಗಲಕೋಟೆ ಮೊದಲಾದೆಡೆ ಕೋವಿಡ್ ಪರೀಕ್ಷಾ ಕೇಂದ್ರಗಳಿಲ್ಲದ ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲಾಸ್ಪತ್ರೆ, ಕೋವಿಡ್ ಪರೀಕ್ಷಾ ಕೇಂದ್ರಗಳಿಗೆ ಎಡತಾಕಬೇಕಾಯಿತು.

ಇನ್ನು ಚಿಕ್ಕಬಳ್ಳಾಪುರ, ಕೋಲಾರ, ಹಾಸನ, ವಿಜಯಪುರ, ಬಾಗಲಕೋಟೆ, ಯಾದಗಿರಿ ಜಿಲ್ಲೆ ಸೇರಿ ಹಲವೆಡೆ ಗ್ರಾಮೀಣ ಭಾಗಗಳಲ್ಲಿ ಅನೇಕ ವಿದ್ಯಾರ್ಥಿಗಳಿಗೆ ತರಗತಿಗೆ ಆಗಮಿಸುವ ಆಸೆ ಇದ್ದರೂ ಸಮರ್ಪಕ ಬಸ್ ವ್ಯವಸ್ಥೆ, ಬಸ್ ಪಾಸ್ ಅಲಭ್ಯತೆಯಿಂದಾಗಿ ಸಮಸ್ಯೆಯಾಯಿತು. ಈ ಎಲ್ಲ ಕಾರಣಗಳಿಂದಾಗಿ ಬಾಗಲಕೋಟೆ ಜಿಲ್ಲೆಯ ಬಹುತೇಕ ಕಡೆ ಶೂನ್ಯ ಹಾಜರಾತಿ ಕಂಡುಬಂದಿದ್ದರೆ ಕೆಲವೆಡೆ ನಾಲ್ಕಾರು ವಿದ್ಯಾರ್ಥಿಗಳು ಮಾತ್ರ ತರಗತಿಗೆ ಹಾಜರಾಗಿದ್ದರು. ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ರಾಣಿ ಚೆನ್ನಮ್ಮ ವಿವಿಗಳ ತರಗತಿಗಳಲ್ಲಿ ಒಬ್ಬರೋ, ಇಬ್ಬರೋ ವಿದ್ಯಾರ್ಥಿಗಳು ಬಂದದ್ದೂ ಇದೆ. ಭಟ್ಕಳದ ಸಿದ್ಧಾರ್ಥ ಕಾಲೇಜಿನಲ್ಲಿ ಮೊದಲ ದಿನ ಎಲ್ಲಾ 70 ವಿದ್ಯಾರ್ಥಿಗಳು ಕಾಲೇಜಿಗೆ ಆಗಮಿಸಿದ್ದು ವಿಶೇಷವಾಗಿತ್ತು.

## ಏಕೈಕ ವಿದ್ಯಾರ್ಥಿನಿಗೆ ಪಾಠ ಮಾಡಿದ ಉಪನ್ಯಾಸಕ



ರಾಯಚೂರು: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿನಿಯೊಬ್ಬಳೆ ಮಾತ್ರ ಹಾಜರಾಗಿದ್ದು ಕೋವಿಡ್ ನಿಯಮ ಪಾಲಿಸಿ ಉಪನ್ಯಾಸಕರು ಏಕೈಕ ವಿದ್ಯಾರ್ಥಿನಿಗೆ ಮಾತ್ರ ಪಾಠ ಮಾಡಿರುವ ಪ್ರಸಂಗ ನಡೆದಿದೆ. ಕಾಲೇಜಿನಲ್ಲಿ ಒಟ್ಟು 1,200 ಜನ ಅಂತಿಮ ವರ್ಷದ ವಿದ್ಯಾರ್ಥಿಗಳ ಪೈಕಿ ಕೇವಲ ಐದಾರು ವಿದ್ಯಾರ್ಥಿಗಳು ಮಾತ್ರ ಕಾಲೇಜಿಗೆ ಬಂದು ಹೋಗಿದ್ದಾರೆ.

## ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳದ ಪ್ರಾಚಾರ್ಯ!

ದಾವಣಗೆರೆ: ಪ್ರಾಚಾರ್ಯರಾದಿಯಾಗಿ ಎಲ್ಲರೂ ಕೋವಿಡ್-19 ಟೆಸ್ಟ್ ಮಾಡಿಸಿಕೊಳ್ಳಬೇಕೆಂಬ ಆದೇಶವಿದ್ದರೂ ಪ್ರಾಂಶುಪಾಲರು, 70 ಮಂದಿ ಬೋಧಕರು, ಸಿಬ್ಬಂದಿ ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳದೇ ಆಗಮಿಸಿದ ಘಟನೆ ಇಲ್ಲಿನ ಸರ್ಕಾರಿ ಕಾಲೇಜಿನಲ್ಲಿ ನಡೆದಿದೆ. ಕೊರೋನಾ ತಡೆಯಲು ಕಾಲೇಜುಗಳಿಗೆ ಸರ್ಕಾರ ಮಾರ್ಗಸೂಚಿ ನಿಗದಿಪಡಿಸಿದರೂ ಈ ಕಾಲೇಜಿನಲ್ಲಿ ಥರ್ಮಲ್ ಸ್ಕ್ಯಾನಿಂಗ್, ಸ್ಯಾನಿಟೈಸ್ ಮಾಡಲು ಯಾವುದೇ ವ್ಯವಸ್ಥೆ ಇರಲಿಲ್ಲ. ಅಲ್ಲದೇ ಪ್ರಾಚಾರ್ಯ ಪ್ರೊ.ಟಿ.ಕೆ.ಶಂಕರಯ್ಯ ಸ್ವತಃ ಕೋವಿಡ್ ಟೆಸ್ಟ್ ಮಾಡಿಸಿರಲಿಲ್ಲ. ಜೊತೆಗೆ ಕಾಲೇಜಿನ ಬಹುತೇಕ 70 ಜನ ಬೋಧಕರು, ಸಿಬ್ಬಂದಿ ಸಹ ಕೋವಿಡ್ ಟೆಸ್ಟ್ ಮಾಡಿಸಿಕೊಂಡಿರಲಿಲ್ಲ.

## ಪ್ರಾಂಶುಪಾಲರಿಗೆ ತರಾಟೆ

ಕೋಲಾರ: ನಗರದ ಸರ್ಕಾರಿ ಮಹಿಳಾ ಕಾಲೇಜಿಗೆ ಮಂಗಳವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಕಾಲೇಜು ಆರಂಭಕ್ಕೆ ಕನಿಷ್ಠ ಸಿದ್ಧತೆಯನ್ನೂ ನಡೆಸದಿರುವುದನ್ನು ಕಂಡು ಸಿಡಿಮಿಡಿಗೊಂಡ ಪ್ರಾಂಶುಪಾಲ ಗಂಗಾಧರ ರಾವ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಮೂರು ದಿನ ರಜೆ ಇದ್ದ ಸಂದರ್ಭದಲ್ಲಿ ಕೆಲಸ ಮಾಡಿಸಲು ಏನು ಸಮಸ್ಯೆ, ವಿದ್ಯಾರ್ಥಿನಿಯರು ತಮ್ಮ ವ್ಯಾಪ್ತಿಯ ಪಿಎಚ್‌ಸಿ ಕೇಂದ್ರದಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಬರಬೇಕಿತ್ತು, ಒಬ್ಬರೂ ಮಾಡಿಸಿಕೊಂಡಿಲ್ಲ, ಪರೀಕ್ಷೆ ನಡೆಸುವ ಬಗ್ಗೆ ಆರೋಗ್ಯ ಇಲಾಖೆಯನ್ನೂ ನೀವು ಸಂಪರ್ಕಿಸಿಲ್ಲ, ಪರೀಕ್ಷೆ ನಡೆಸಲು ನಾವೇ ವೈದ್ಯ ಸಿಬ್ಬಂದಿಗಳನ್ನು ಕರೆಸಿದ್ದೇವೆ. ಹೀಗಾದರೆ ಹೇಗೆ ಎಂದು ಪ್ರಶ್ನಿಸಿದರು.

## ಒಂದು ಕಾಲೇಜಿನಲ್ಲಿ ಫುಲ್, ಒಂದು ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿಯೂ ಇಲ್ಲ!

ಬಾಗಲಕೋಟೆ/ಭಟ್ಕಳ: ಉತ್ತರ ಕನ್ನಡದ ಭಟ್ಕಳದ ಕಾಲೇಜುವೊಂದರಲ್ಲಿ ಮೊದಲ ದಿನವೇ ಎಲ್ಲ ವಿದ್ಯಾರ್ಥಿಗಳು ಹಾಜರಾಗಿ ಗಮನ ಸೆಳೆದರೆ, ಬಾಗಲಕೋಟೆಯ ಕಾಲೇಜುವೊಂದರಲ್ಲಿ ಮೊದಲ ದಿನ ಒಬ್ಬನೇ ಒಬ್ಬ ಆಗಮಿಸದೇ ಪ್ರಾಧ್ಯಾಪಕರು ನಿರಾಸೆ ಅನುಭವಿಸುವಂತಾಯಿತು. ಕಾಲೇಜುಗಳಲ್ಲಿ ಎಲ್ಲ ನಿಯಮಗಳನ್ನು ಪಾಲಿಸಿದರೂ ಬಾಗಲಕೋಟೆಯ ಬಸವೇಶ್ವರ ಮಹಾವಿದ್ಯಾಲಯ ಸೇರಿ ಕೆಲವೆಡೆ ಒಬ್ಬನೇ ಒಬ್ಬ ವಿದ್ಯಾರ್ಥಿಯೂ ತರಗತಿಗೆ ಹಾಜರಾಗಲಿಲ್ಲ. ಇನ್ನು ಉತ್ತರ ಕನ್ನಡದ ಭಟ್ಕಳದ ಸಿದ್ಧಾರ್ಥ ಕಾಲೇಜಿನಲ್ಲಿ ಎಲ್ಲ (70ಕ್ಕೆ 70) ವಿದ್ಯಾರ್ಥಿಗಳು ಹಾಜರಾಗಿ ಗಮನ ಸೆಳೆದರು. ತಾಲೂಕು ಆರೋಗ್ಯ ಇಲಾಖೆ ವೈದ್ಯಾಧಿಕಾರಿ, ಸಿಬ್ಬಂದಿ ಕಾಲೇಜಿಗೆ ಆಗಮಿಸಿ ಸಿಬ್ಬಂದಿ, ವಿದ್ಯಾರ್ಥಿಗಳ ಗಂಟಲುದ್ರವದ ಮಾದರಿ ಸಂಗ್ರಹಿಸಿದರು.

## ಗುಲಾಬಿ, ಸಿಹಿ ಸ್ವಾಗತ

ವಿಜಯಪುರ/ಬಾಗಲಕೋಟೆ/ದಾವಣಗೆರೆ: ಬಾಗಲಕೋಟೆಯ ನವನಗರದ ಸರ್ಕಾರಿ ಪದವಿ ಕಾಲೇಜಿಗೆ ಆಗಮಿಸಿದ 400 ವಿದ್ಯಾರ್ಥಿಗಳನ್ನು ಉಪನ್ಯಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಬರಮಾಡಿಕೊಂಡು ಹೂ ಹಾಗೂ ಚಾಕೋಲೇಟ್ ನೀಡಿ ಸ್ವಾಗತಿಸಿ, ತರಗತಿಯ ಕೊಠಡಿಗಳ ಪ್ರವೇಶ ದ್ವಾರಕ್ಕೆ ಕಟ್ಟಿದ್ದ ರಿಬ್ಬನ್ ಕತ್ತರಿಸುವ ಮೂಲಕ ಗೌರವ ನೀಡಿದರು. ಇನ್ನು ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯ ಎವಿಕೆ ಮಹಿಳಾ ಕಾಲೇಜಿನಲ್ಲಿ ಪ್ರಾಚಾರ್ಯ ಡಾ.ಬಿ.ಪಿ.ಕುಮಾರ್ ತರಗತಿಗೆ ಹಾಜರಾದ ಪ್ರಥಮ ವಿದ್ಯಾರ್ಥಿನಿಗೆ ಪುಷ್ಪಗುಚ್ಛ

## ಪಾಸ್ ಇಲ್ಲದ ಕಾರಣ ಆಗಮಿಸದ ವಿದ್ಯಾರ್ಥಿಗಳು

ವಿಜಯಪುರ: ಕಾಲೇಜುಗಳು ಈಗತಾನೆ ಆರಂಭಗೊಂಡಿರುವ ಕಾರಣ ವಿದ್ಯಾರ್ಥಿಗಳಿಗೆ ಬಸ್ ಪಾಸ್‌ಗಳನ್ನು ಇನ್ನೂ ವಿತರಿಸಿಲ್ಲ. ಹೀಗಾಗಿ ದೂರದ ಊರುಗಳಿಂದ ಬರಬೇಕಾದರೆ ವಿದ್ಯಾರ್ಥಿಗಳು ಬಸ್ ಟಿಕೆಟ್‌ಗಾಗಿ ಪೂರ್ತಿ ಹಣ ನೀಡಬೇಕಿರುವುದು ಅನಿವಾರ್ಯ ಹಿನ್ನೆಲೆಯಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಕಾಲೇಜಿಗೆ ಗೈರಾಗಿದ್ದರು. ದೂರದೂರಿಂದ ಆಗಮಿಸುವ ಬಡವಿದ್ಯಾರ್ಥಿಗಳು ಹಣಕ್ಕಾಗಿ ಪರದಾಡಬೇಕಾದ ಸ್ಥಿತಿ ಇದೆ. ನಮಗೆ ಬಸ್ ಪಾಸ್ ಬೇಕಿದೆ ಎಂದು ವಿಜಯಪುರದ ವಿಜಯ್ ಮಂಗಳೂರು ಮತ್ತು ಕೂಡಗಿಯ ಸಿದ್ದು ಹಾಗೂ ಇಬ್ರಾಹಿಂ ಎಂಬ ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.